MR. SPEAKER.—I will pursue the matter.

SRI S. M. SHEERNALY CHANDRASHEKHAR.—Sir, I have sent a calling Attention Notice about 5 days back regarding the Scarcity of drinking water in five villages of Shimoga. It is a very urgent matter. I am receiving telegrams repeatedly.

MR. SPEAKER.— I will look into it.

ಶ್ರೀ ಡಿ. ಟಿ. ಮಾಯಣ್ಣ.—ನಾನು ಒಂದೆರಡು ಕ್ವೊಶ್ಚನ್ಸ್ ಕಳಿಸಿದ್ದೆ, ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು.—ಸರ್ಕಾರದಿಂದ ಕೆಲವು ಪ್ರಶ್ನೆಗಳಿಗೆ ಉತ್ತರ ಬಂದಿದೆ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಎಂ. ತಮ್ಮಯ್ಯ.—ನಾನು ಟೀಕ್ ಬಗ್ಗೆ ಕಾಲಿಂಗ್ ಅಟೆನ್ಷನ್ ಹಾಕಿದ್ದೇನೆ, ಇನ್ನೂ ಉತ್ತರ ಬಂದಿಲ್ಲ.

ಶ್ರೀ ಎಂ. ರಾಮಪ್ಪ.—ನಾನು ಶುಗರ್ ಫ್ಯಾಕ್ಟರಿ ಬಗ್ಗೆ ಕಾಲಿಂಗ್ ಅಟೆನ್ಷನ್ ಕಳಿಸಿ ಏಳೆಂಟು ದಿವಸ ಆಯಿತು, ಇನ್ನೂ ಬರಲಿಲ್ಲ. ದಯವಿಟ್ಟು ಅದನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ.

CALLING ATTENTION TO A MATTER OF URGENT PUBLIC IMPORTANCE

Reg. Supply of Bamboos to Medars in the State.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮೇದಾರರಿಗೆ ಸಕಾಲದಲ್ಲಿ ಮತ್ತು ಸರಿಯಾಗಿ ಬಿದಿರಿನ ಸರಬರಾಜು ಇಲ್ಲದೆ ಆಗಿರತಕ್ಕ ಬವಣೆ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ. ಜಿ. ಮಾದೇಗೌಡ. (ಅರಣ್ಯ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ಗಮನ ಸೆಳೆಯುವ ಸೂಚನೆಗೆ ಈ ರೀತಿ ಹೇಳಿಕೆ ನೀಡಲು ಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ದೊಡ್ಡ ಮತ್ತು ಸಣ್ಣದಾದ ಎರಡು ರೀತಿಯ ಬಿದಿರು ದೊರೆಯುತ್ತದೆ. ಮೇದರು ಮತ್ತು ಬುರುಡರು ಸಣ್ಣ ಬಿದಿರನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ೧೯೫೬ರಿಂದ ೧೯೭೦ರ ವರೆವಿಗೆ ಮುಳುಗಡೆಯಿಂದ, ನಿರಾಶ್ರಿತರಿಗೆ ವಸತಿಯನ್ನು ಕಲ್ಪಿಸಲು ಮತ್ತು ಅರಣ್ಯ ಭೂಮಿಯನ್ನು ವ್ಯವಸಾಯಕ್ಕೆ ಮತ್ತು ಗಣಿಗಳಿಗಾಗಿ ನೀಡಿದ್ದರಿಂದ ಬಿದಿರು ಬೆಳೆಯುವ ಪ್ರದೇಶವು ನಾಶವಾಗಿ ಬಿದಿರು ಅಭಾವ ಜಾಸ್ತಿಯಾಯಿತು. ಇದರಿಂದ ರಾಜ್ಯದಲ್ಲಿ ಬಿದಿರಿನ ಉತ್ಪತ್ತಿ ವಾರ್ಷಿಕ ೧.೫ ಲಕ್ಷ ಟನ್ನಿಗೆ ಇಳಿದಿದೆ. ಬಿದಿರಿನ ಬೀಜ ಮೊಳೆಯುವಿಕೆ ವಿಶಿಷ್ಟವಾದ ರೀತಿಯಲ್ಲಿ ಅತಿ ಹೆಚ್ಚು ಪ್ರದೇಶದಲ್ಲಿ ಉಂಟಾಗಿ ಅತಿ ಶೀಘ್ರದಲ್ಲಿಯೇ ಸಸಿಗಳು ಸಾಯುತ್ತವೆ. ಹಸಿರು ಬಿದಿರನ್ನು ಮೇದರು ಉಪಯೋಗಿಸುತ್ತಾರೆ, ಆದರೆ ಬಿದಿರಿನ ಬೀಜೋತ್ಪತ್ತಿ ಮತ್ತು ಬೀಜ ಮೊಳೆಯುವ ಕಾಲದಲ್ಲಿ ಹಸಿರು ಬಿದಿರನ್ನು ಕತ್ತರಿಸಲು ಅವಕಾಶ ವಿರುವುದಿಲ್ಲ. ಏಕೆಂದರೆ ಇದು ಮುಂದಿನ ಉತ್ಪತ್ತಿಗೆ ಮಾರಕವಾಗುತ್ತದೆ. ಇಂತಹ ಪ್ರದೇಶದಲ್ಲಿ ಬೀಜ ಪ್ರಸಾರವಾದ ಮೇಲೆ ಮತ್ತು ಪಕ್ವ ಬಿದಿರು ಒಣಗಿದ ಮೇಲೆ ಕತ್ತರಿಸಲಾಗುತ್ತದೆ.

ಮೈಸೂರು ಕಾಗದ ಕಾರ್ಖಾನೆ ಮತ್ತು ಬೆಸ್ಕೋಸ್ಟ್ ಕಾಗದ ಕಾರ್ಖಾನೆಗಳಿಗೆ ಬಿದಿರು ಒದಗಿಸಲು ಒಪ್ಪಂದ ಮಾಡಿಕೊಂಡಾಗ ಬಿದಿರಿನ ಉತ್ಪತ್ತಿ ರಾಜ್ಯದಲ್ಲಿ ಸಮಾಧಾನಕರವಾಗಿತ್ತು. ಬೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆಗೆ ವರ್ಷಕ್ಕೆ ೧,೬೦,೦೦೦ ಟನ್ನುಗಳು ಮತ್ತು ಮೈಸೂರು ಕಾಗದ ಕಾರ್ಖಾನೆಗೆ ೧.೫ ಲಕ್ಷ ೦೦೦ ಟನ್ನುಗಳು ಇರುವಿಕೆಗೆ ಅನುಸಾರವಾಗಿ ಕೊಡಲು ಒಪ್ಪಲಾಗಿತ್ತು. ಈ ಎರಡು ಕಾರ್ಖಾನೆಗಳು ಒಟ್ಟಾಗಿ ಸಾಮಾನ್ಯವಾಗಿ ಒಂದು ಲಕ್ಷ ಟನ್ನುಗಳಷ್ಟು ಪಡೆಯುತ್ತಿದ್ದಾರೆ. ಈ ಎರಡು ಕಾರ್ಖಾನೆಯಲ್ಲಿನ ಕರಾರುಗಳಲ್ಲಿ ಮೇದಾರರು ಮತ್ತು ಬುರುಡರುಗಳಿಗೆ ಅವಶ್ಯಕತೆಯಿರುವ ಬಿದಿರನ್ನು ಪೂರೈಸಬೇಕೆಂಬ ಷರತ್ತನ್ನು ಹಾಕಲಾಗಿದೆ.

೧೯೭೨ ರಿಂದ ಮೇದಾರರಿಗೆ ಬಿದಿರನ್ನು ಅರಣ್ಯ ಇಲಾಖೆಯ ಡಿಪೋಗಳಿಂದ ಒದಗಿಸಲಾಗುತ್ತಿದೆ. ಫೆಬ್ರುವರಿ ೧೯೮೧ರ ವರೆಗೆ ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಪರಿಮಿತಿಯಲ್ಲಿರುವ ಮೇದಾರರಿಂದ ಸ್ವೀಕೃತವಾದ ಅರ್ಜಿಗಳನ್ನು ಬಿದಿರಿನ ಪೂರೈಕೆಯಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಕಳುಹಿಸಲಾಗುತ್ತಿತ್ತು. ತಿಂಗಳಿಗೆ ಕುಟುಂಬ ಒಂದಕ್ಕೆ ೧೦೦ ಬಿದಿರುಗಳವರೆವಿಗೆ ಇರುವಿಕೆಗೆ ಅನುಸಾರವಾಗಿ ಒದಗಿಸಲಾಗುತ್ತಿದೆ. ಹಲವಾರು ಸಂದರ್ಭಗಳಲ್ಲಿ ಕೆಲವು ನಿರ್ದಿಷ್ಟ ವಲಯಗಳಲ್ಲಿ ಬಿಧಿರಿನ ಬೇಡಿಕೆ ಹೆಚ್ಚಾಗಿ ಅವುಗಳನ್ನು ಒದಗಿಸಲು ಅಶಕ್ತರಾಗಿ ಬೇರೆ ವಲಯಗಳಲ್ಲಿ ಬಿದಿರಿನ ಪೂರೈಕೆ ಕುರಿತು ವಿಚಾರಿಸಿಕೊಳ್ಳುವ ಸಂದರ್ಭಗಳು ತಿಳುವಳಿಕೆಗೆ ಬಂದಿರುತ್ತೆ. ಇದರ ಪರಿಣಾಮವಾಗಿ ವಿಳಂಬ ಮತ್ತು ಕೆಲವು ಸಂದರ್ಭಗಳಲ್ಲಿ ನಿರಾಕರಣೆಗೆ ಕಾರಣವಾಗಿದೆ. ಫೆಬ್ರುವರಿ ೧೯೮೧ರಲ್ಲಿ ನಿರ್ದಿಷ್ಟವಾಗಿ ಬಿದಿರು ಬೆಳೆಯುವ ವಲಯಗಳನ್ನು ರಾಜ್ಯದ ಪ್ರತಿ ತಾಲ್ಲೂಕು ಮತ್ತು ಜಿಲ್ಲೆಗಳಿಗೆ ಮೇದಾರರ ಅವಶ್ಯಕತೆಯನ್ನು ಪೂರೈಸಲು ನಿಗದಿಪಡಿಸಲಾಗಿದೆ. ಬೇಡಿಕೆಗಳಿಗೆ ಅನುಸಾರವಾಗಿ ಅರಣ್ಯವಲಯಗಳು ಬಿದಿರನ್ನು ಒದಗಿಸುವ ವಿಚಾರವನ್ನು ಅರಿತಿರುವುದರಿಂದ, ಕಡಿಯುವ ಮತ್ತು ಒದಗಿಸುವ ಕಾರ್ಯ ನಿರಾಂತಕವಾಗಿತ್ತು. ಕೆಲವು ಸಂದರ್ಭಗಳಲ್ಲಿ ಮೇದಾರರು ಒಂದಲ್ಲಾ ಒಂದು ವಲಯಗಳಿಗೆ ತಾವು ಹಿಂದೆ ಈ ವಲಯಗಳಿಂದ ತಮ್ಮ ಬೇಡಿಕೆಯನ್ನು ಪೂರೈಸಿಕೊಳ್ಳುತ್ತಿದ್ದೆವು, ಅಥವಾ ದಾಸ್ತಾನು ಇಲ್ಲವೆಂದು ಅಥವಾ ದೂರವೆಂಬ ಕಾರಣದಿಂದ ತಮ್ಮ ವಲಯವನ್ನು ಬದಲಿಸಬೇಕೆಂದು ಬೇಡಿಕೊಳ್ಳುತ್ತಿದ್ದರು. ಕೊನೆಯ ಕಾರಣವು ಅಷ್ಟು ಸಮಂಜಸವಾಗುವುದಿಲ್ಲ, ಏಕೆಂದರೆ, ವಿಭಜನೆಯನ್ನು ದೂರಕ್ಕೆ ಮತ್ತು ಪ್ರಾಪ್ತತೆಯನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗಿದೆ. ತದ್ವಿರುದ್ಧವಾಗಿ ಮೇದಾರರಿಗೆ ಮತ್ತು ಅವರ ಸಂಘಗಳಿಗೆ, ಅವರಿಗೆ ಮಂಜೂರಾದ ಬಿದಿರನ್ನು ತೆಗೆದುಕೊಂಡು ಹೋಗಲು ಅನೇಕ ಸಲ ಸೂಚನೆ ಕೊಟ್ಟ ನಿದರ್ಶನಗಳಿವೆ.

ಈ ಇಲಾಖೆಗೆ ಸಮಸ್ಯೆಗಳ ಅರಿವಿದೆ. ಮೇದಾರರ ಜನ ಸಂಖ್ಯೆ ಸಾಮಾನ್ಯವಾಗಿ ಬಿದಿರು ಇಲ್ಲದಿರುವ ಸ್ಥಳಗಳಲ್ಲಿ ಕೇಂದ್ರೀಕೃತವಾಗಿರುವುದೆ ಒಂದು ಮುಖ್ಯ ಸಮಸ್ಯೆ. ಇದು ಮಧ್ಯವರ್ತಿಗಳ ಹಾವಳಿಗೆ ಎಡೆಮಾಡಿಕೊಡುತ್ತದೆ. ಇಂತಹ ಸಂದರ್ಭಗಳಲ್ಲಿ ಅನುಮಾನ ಬಂದಾಗ ವಿಚಾರಣೆ ನಡೆಸಿ ತೀರ್ಮಾನಕ್ಕೆ ಬರಲು ವಿಳಂಬವಾಗುತ್ತದೆ. ಮತ್ತೊಂದು ಸಮಸ್ಯೆ ಏನೆಂದರೆ ಒಣ ಬಿದಿರನ್ನು ಬಿಟ್ಟು ಬಾಕಿ ಬಿದಿರನ್ನು ಕತ್ತರಿಸಲು ಜೂನ್ ಮಾಹೆಯಿಂದ ಅಕ್ಟೋಬರ್ ಮಾಹೆಯವರೆವಿಗೆ ಅವಕಾಶವಿರುವುದಿಲ್ಲ ಏಕೆಂದರೆ, ಈ ಕ್ರಮವು ಬಿದಿರಿನ ಮಂಥಿನ ಉತ್ಪತ್ತಿಗೆ ಮಾರಕವಾಗುತ್ತದೆ.

ಮೇದಾರರಿಗೆ ೧೯೮೦-೮೧ರಲ್ಲಿ ೨೨,೦೪,೫೪೬ ಬಿದಿರುಗಳನ್ನು ಮತ್ತು ೧೯೮೧-೮೨ನೇ ಸಾಲಿನಲ್ಲಿ ೬,೮೦,೫೨೨ ಬಿದಿರುಗಳನ್ನು ಸರಬರಾಜು ಮಾಡಲಾಯಿತು. ಬಿದಿರು ಬೀಜ ಪ್ರಸಾರ ಪ್ರದೇಶದಲ್ಲೂ ಬಿದಿರು ಕತ್ತರಿಸುವುದನ್ನು ನಿಲ್ಲಿಸಿದರ ಪರಿಣಾಮವಾಗಿ ಈ ಕೊರತೆ ೮೧-೮೨ರಲ್ಲಿ ಉಂಟಾಯಿತು. ಈ ವರ್ಷ ಅಂದರೆ ೧-೪-೧೯೮೨ ರಿಂದ ಈವರೆಗೆ ೫,೧೫,೦೦೦ ಬಿದಿರನ್ನು ಮೇದಾರರಿಗೆ ಹಂಚುವ ಸಲುವಾಗಿ ಮರು ವಿಭಜನೆ ಮಾಡಿದ ಪ್ರದೇಶದಲ್ಲಿ ಕತ್ತರಿಸಿ ಇಡಲಾಗಿದೆ.

೧೦-೩೦ ಎ.ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ನನ್ನ ಗಮನ ಸೆಳೆಯುವ ವಿಷಯ ಉದ್ದೇಶವೇನೆಂದರೆ, ವಿಶೇಷವಾಗಿ ಈ ಮೇದಾರರಿಗೆ ಆಗತಕ್ಕ ತೊಂದರೆಗಳ ಬಗ್ಗೆ ಸರ್ಕಾರಕ್ಕೆ ತಿಳುವಳಿಕೆ ಇದೆ. ಆ ರೀತಿಯಾದ ತೊಂದರೆಗಳು ಹಿಂದಿನ ವರ್ಷದಿಂದ ಇಲ್ಲಿಯವರೆಗೆ ಆಗುತ್ತಿದೆ ಎನ್ನುವ ಬಗ್ಗೆ ಸರ್ಕಾರ ದವರೇ ಒಪ್ಪಿಕೊಂಡಿದ್ದಾರೆ. ನನ್ನ ಮಾಹಿತಿಯ ಪ್ರಕಾರವಾಗಿ ಸುಮಾರು ೩ ಲಕ್ಷ ಜನ ಮೇದರು ಇದ್ದಾರೆ. ಅವರಿಗೆ ಸಾಕಾಗುವಷ್ಟು ಪ್ರಮಾಣದಲ್ಲಿ ಬಿದುರು ಸಿಗುತ್ತಿಲ್ಲ ಎನ್ನುತಕ್ಕ ತೊಂದರೆಯನ್ನು ಅವರು ನನಗೆ ತಿಳಿಸಿದ್ದಾರೆ. ಸರ್ಕಾರ ಈ ವಿಚಾರದ ಬಗ್ಗೆ ತಮ್ಮ ಹೇಳಿಕೆಯ ಮೂಲಕ ಒಪ್ಪಿಕೊಂಡಿದ್ದಾರೆ. ಆದುದರಿಂದ ಅದರ ಬಗ್ಗೆ ಹೆಚ್ಚಿನ ವಾದ ವಿವಾದಕ್ಕೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಇನ್ನು ಮೇಲಾದರೂ ಮೇದಾರರಿಗೆ ಅವಶ್ಯಕವಾಗಿ ಬೇಕಾಗತಕ್ಕಂಥ ಈ ಬಿದಿರನ್ನು ಯಾವ ತೊಂದರೆಯಿಲ್ಲದೆ ಪೂರೈಕೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎರಡನೆಯದಾಗಿ ಮಂತ್ರಿಗಳವರು ತಮ್ಮ ಹೇಳಿಕೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ.

''ಈ ಇಲಾಖೆಗೆ ಸಮಸ್ಯೆಗಳ ಅರಿವಿದೆ. ಮೇದರರ ಜನಸಂಖ್ಯೆ ಸಾಮಾನ್ಯವಾಗಿ ಬಿದಿರು ಇಲ್ಲಿದಿರುವ ಸ್ಥಳಗಳಲ್ಲಿ ಕೇಂದ್ರಿಕೃತವಾಗಿರುವುದೇ ಒಂದು ಮುಖ್ಯ ಸಮಸ್ಯೆಯಾಗಿದೆ''

ಸಾಮಾನ್ಯವಾಗಿ ಬಿದಿರು ಇರುವ ಕಡೆ ಮೇದರರು ಇರುವುದಿಲ್ಲ. ಬಹಳ ಜನ ಮೇದರರು ಬೆಂಗಳೂರಿನಲ್ಲಿದ್ದಾರೆ, ಅವರೆಲ್ಲಾ ಬಿದಿರು ಇರತಕ್ಕಂಥ ಕಾಡಿಗೆ ಹೋಗಿ ಏಂದು ಹೇಳುವುದು ಸರಿಯಾವ ಉತ್ತರವಲ್ಲ. ಆ ರೀತಿ ಹೇಳುವುದು ನ್ಯಾಯವೂ ಅಲ್ಲ ಧರ್ಮವೂ ಅಲ್ಲ. ಮತ್ತೆ ನ್ಯಾಯವಾದ ಬೆಲೆಗೆ ಬಿದಿರನ್ನು ಒದಗಿಸುವುದಕ್ಕೆ ಸರ್ಕಾರದವರು ತತ್ವತಃ ಒಪ್ಪಿಕೊಂಡಿದ್ದಾರೆ. ''ಬಿದಿರನ್ನು ಒದಗಿಸುವುದರಲ್ಲಿ ಮಧ್ಯವರ್ತಿಗಳಿಂದ ತೊಂದರೆಯಾಯಿತೆಂದು ಒಪ್ಪಿಕೊಂಡಿದ್ದಾರೆ. ಮತ್ತೆ ೧-೪-೧೯೮೨ ರಿಂದ ಈವರೆಗೆ ೫,೧೫,೦೦೦ ಬಿದಿರನ್ನು ಮೇದರರಿಗೆ ಹಂಚುವ ಸಲುವಾಗಿ ಮೆರು ವಿಭಜನೆ ಮಾಡಿದ ಪ್ರದೇಶದಲ್ಲಿ ಕತ್ತರಿಸಿ ಇಡಲಾಗಿದೆ'' ಎಂದು ಹೇಳಿದ್ದಾರೆ. ಈ ಬಿದಿರನ್ನು ಸಾಧಾರಣವಾಗಿ ಎಲ್ಲೆಲ್ಲಿ ಸೊಸೈಟಿಗಳು ಇವೆ ಅಲ್ಲಿಗೆಲ್ಲಾ ಬಿದಿರನ್ನು ಅವರಿಗೆ ಬೇಕಾದಷ್ಟು ಪ್ರಮಾಣದಲ್ಲಿ ಒದಗಿಸುವುದಕ್ಕೆ ಈಗಲಾದರೂ ಪ್ರಯತ್ನ ಪಟ್ಟವರ ಬವಣೆಯನ್ನು ನೀಗಿಸುವುದಕ್ಕೆ ಪ್ರಯತ್ನಪಡುತ್ತಾರೆಯೇ ?

ಶ್ರೀ ಎಚ್.ಎಲ್. ತಿಮ್ಮೇಗೌಡ.—ಅಧ್ಯಕ್ಷರೇ, ಹುಣಸೂರಿನಲ್ಲೂ ಕೂಡ ಮೇದರರ ಸಂಖ್ಯೆ ಜಾಸ್ತಿ ಇದೆ. ಹುಣಸೂರು ಬಿದಿರು ಬೆಳೆಯತಕ್ಕ ಸ್ಥಳದಲ್ಲಿ ಹತ್ತಿರದಲ್ಲಿಯೇ ಇದ್ದರೂ ಕೂಡ ಅವರಿಗೂ ಅನೇಕ ಸಮಸ್ಯೆಗಳು ಇವೆ. ಅವರಿಗೆ ಎಷ್ಟು ಅವಶ್ಯಕತೆ ಇದೆಯೋ ಅಷ್ಟು ಬಿದಿರು ಸಿಗುತ್ತಿಲ್ಲ. ಇನ್ನು ತಮಿಳುನಾಡಿನವರು ಯಾವ ಯಾವ ತರಹದ ಬಿದಿರು ಯಾವ ಯಾವ ಉಪಯೋಗಕ್ಕೆ ಎಷ್ಟೆಷ್ಟು ಬೇಕಾಗುತ್ತದೆಂಬುದನ್ನು ಪ್ಲಾನ್ ಮಾಡಿ ಆ ರೀತಿ ಬೆಳೆಸುವುದಕ್ಕೆ ಪ್ರಯತ್ನ ಮಾಡಿದ್ದಾರೆ ಆ ರೀತಿಯ ಪ್ರಯತ್ನ ನಮ್ಮಲ್ಲಿ ಮಾಡದಿದ್ದರೆ ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ. ಹುಣಸೂರಿನಲ್ಲಿ ಕೂಡ ಈ ಬಿದಿರಿನ ಪ್ರಾಬ್ಲಂ ಬಹಳ ಇದೆ, ಅವರು ಗದ್ದೆ ಹೊಲದಲ್ಲಿ ಕೂಡ ಕೆಲಸಮಾಡುವುದಿಲ್ಲ, ಇದೊಂದೇ ವೃತ್ತಿಯನ್ನು ಅವಲಂಬಿಸಿರುವುದರಿಂದ ಅವರಿಗೆ ತೊಂದರೆಯಾಗದ ರೀತಿಯಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಡಿ. ಸೋಮಪ್ಪ.—ಅಧ್ಯಕ್ಷರೇ, ಹಾಸನ ಜಿಲ್ಲೆಯಲ್ಲೂ ಕೂಡ ಮೇದರರು ಜಾಸ್ತಿ ಇದ್ದಾರೆ. ಈಗ ಕಂಪ್ಲೀಟ್ ಆಗಿ ಬಿದಿರು ನಾಶವಾಗಿ ಹೋಗಿ ಬಿಟ್ಟಿದೆ. ಮಲೆನಾಡಿನಲ್ಲಿ ವಾಟೆ ಎಂದು ಇದೆ. ಆದರಿಂದ ಕೊರಗಗಳನ್ನು ಮಾಡುತಾ ರೆ, ರೈತರು ಮಳೆಗಾಲದಲ್ಲಿ ೫೦-೬೦ ರೂಪಾಯಿ ಕೊಟ್ಟು ಕೂಡೆಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದಕ್ಕೆ ಅವರು ಈ ವಾಟೆಯನ್ನು ಉಪಯೋಗಿಸುತ್ತಾರೆ. ಆದುದರಿಂದ ಅವರಿಗೂ ಸಹ ಇತ್ತೀನ ದಿವಸ ಈ ಗೊರಕ ನೀಯುವುದಕ್ಕೆ ಬಹಳ ತೊಂದರೆಯಾಗಿದೆ ಅವರಿಗೂ ಸಹ ಮಂತ್ರಿಗಳವರು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಮಲೆನಾಡಿನಲ್ಲಿ ಬಿದಿರನ್ನು ಬೆಳೆಸುವುದಕ್ಕೆ ಯಾವುದೇ ಕ್ರಮವನ್ನು ಕೂಡ ಹಾಕಿದ ಹಾಗೆ ಕಾಣುತ್ತಿಲ್ಲ. ಇರತಕ್ಕಂಥದ್ದು ಕೂಡ ನಶಿಸಿ ಹೋಗುತ್ತಿದೆಯೇ ಹೊರತು ಹೊಸದಾಗಿ ಬೆಳೆಸಿದ ಹಾಗೆ ಕಾಣುತ್ತಿಲ್ಲ. ಆದುದರಿಂದ ಮಲೆನಾಡಿನ ಭಾಗದಲ್ಲಿ ಈ ಬಿದಿರನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಾವುರಾವ್ ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ನಮ್ಮ ಬೆಳಗಾಂನ ಹತ್ತಿರ ಹಳಿಯಾಳ, ಯಲ್ಲಾಪುರದಲ್ಲಿ ಬಿದಿರನ್ನು ಬೆಳೆಯುತ್ತಿದ್ದರು. ಅಲ್ಲಿನ ಬಿದಿರನ್ನು ದಾಂಡೇಲಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್‌ಗೆ ಕೊಟ್ಟ ಮೇಲೆ, ಮೇದರರಿಗೆ ಬಿದಿರು ಸಿಕ್ಕುವುದೇ ಬಹಳ ತೊಂದರೆಯಾಗಿದೆ. ಮತ್ತು ಬಿದಿರನ್ನು ಬೆಳೆಸುವುದಕ್ಕೂ ಸಹ ನಮ್ಮ ಇಲಾಖೆಯವರು ನಿಗಾವಹಿಸುತ್ತಿಲ್ಲ. ಆದುದರಿಂದ ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇನ್ನು ಮುಂದಾದರೂ ಬಿದಿರನ್ನು ಬೆಳೆಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಗಂಗಾಧರನ್.—ನಮ್ಮ ಕೊಳ್ಳೆಗಾಲ ತಾಲ್ಲೂಕಿನವರಿಗೆ ಕೊಳ್ಳೆಗಾಲ ಫಾರೆಸ್ಟ್‌ನಿಂದ ಬಿದಿರನ್ನು ತೆಗೆದುಕೊಳ್ಳುವುದಕ್ಕೆ ಪರ್ಮಿಷನ್ ಕೊಡುತ್ತಿದ್ದರು. ಆದರೆ ಈಗ ಸಾಗರ, ಶಿವಮೊಗ್ಗ ಫಾರೆಸ್ಟ್‌ನಿಂದ ತೆಗೆದುಕೊಂಡು ಬರಲು ಲೆಸೆನ್ಸ್‌ನ್ನು ಕೊಡುತ್ತಿದ್ದಾರೆ. ಇದರಿಂದ ಸಾರಿಗೆಯ ವೆಚ್ಚ ಜಾಸ್ತಿಯಾಗುತ್ತಿದೆ. ಕೊಳ್ಳೆಗಾಲದಲ್ಲಿರತಕ್ಕ ಬಿದಿರನ್ನು ಭದ್ರಾವತಿ ಫ್ಯಾಕ್ಟರಿಗೆ ಕೊಡುತ್ತಿದ್ದಾರೆ. ಆದುದರಿಂದ ಫ್ಯಾಕ್ಟರಿಯವರಿಗೆ ಕೊಡುವುದಾದರೆ ಜಾಸ್ತಿ ರೇಟ್‌ನಲ್ಲಿ ಕೊಟ್ಟು ಮೇದರರಿಗೆ ಕಡಿಮೆ ರೇಟ್‌ನಲ್ಲಿ ಕೊಳ್ಳೆಗಾಲದಲ್ಲಿಯೇ ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ಅಧ್ಯಕ್ಷರೇ, ನಮ್ಮ ಕಡೆಯಲ್ಲಿ ಈ ಬಿದಿರು ಮತ್ತು ವಾಟೆಯಿಂದಲೇ ತಮ್ಮ ಜೀವನವನ್ನು ಅವಲಂಬಿಸಿರತಕ್ಕಂಥ ಜನರಿದ್ದಾರೆ, ಅವರಿಗೆ ಒಣಗಿದ ಬಿದಿರುಗಳನ್ನು

ಕೊಡುತ್ತಿದ್ದಾರೆ. ಆದರಿಂದ ಅವರಿಗೆ ಪ್ರಯೋಜನವಾಗುವುದಿಲ್ಲ. ಹಸಿ ಬಿದಿರಾದರೆ ಅದನ್ನು ಕತ್ತರಿಸಿ ಬೆತ್ತ ಎತ್ತುವುದಕ್ಕೆ ಅನುಕೂಲವಿರುತ್ತದೆ ಆದುದರಿಂದ ಅವರಿಗೂ ಸಹ ಸರಕಾರಕ್ಕೆ ಬಿದಿರನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ರಾಮೇಗೌಡ.– ಅಧ್ಯಕ್ಷರೇ, ಇವತ್ತು ನಮ್ಮ ರಾಜ್ಯದಲ್ಲಿ ಮೇದರರು ಈ ಕಸಬಿನಿಂದಲೇ ಜೀವನ ಮಾಡುತ್ತಿದ್ದಾರೆ. ಅವರಿಗೆ ತಾವು ಬೊಂಬನ್ನು ಕೊಡದೇ ಹೋದರೆ ಜೀವನ ಮಾಡತಕ್ಕದ್ದು ಬಹಳ ಕಷ್ಟವಿದೆ. ನಮ್ಮಲ್ಲಿ ಬೊಂಬಿನ ಸಮಸ್ಯೆ ಇಲ್ಲ ಆದರೆ ಅದರ ವಿತರಣೆಯ ಸಮಸ್ಯೆಯಿಂದ ಈ ಪರಿಸ್ಥಿತಿ ಉಂಟಾಗಿದೆ ಎಂದು ತಿಳಿಸಿದ್ದಾರೆ. ಆದುದರಿಂದ ಮೇದರರಿಗೆ ಅವಶ್ಯಕತೆ ಇರುವಷ್ಟು ಬೊಂಬನ್ನು ಸರಕಾರಕ್ಕೆ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಜಿ. ಮಾದೇಗೌಡ.—ಆಧ್ಯಕ್ಷರೇ ವಿತಕ್ಕೋಸ್ಕರ ನಿಧಾನವಾಯಿತು ಎಂಬುದನ್ನು ಹೇಳಿದ್ದೇನೆ. ಬೊಂಬು ಸಾಕಷ್ಟು ಇದೆ, ವಿತರಣೆ ಮಾಡತಕ್ಕದರಲ್ಲಿ ಸ್ವಲ್ಪ ಕ ವಾಯಿತು ಎನ್ನುವ ಮಾತನ್ನು ಹೇಳಿದ್ದೇನೆ. ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಮತ್ತು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಬೊಂಬು ಸಿಗುತ್ತದೆ. ಪ್ರತಿಯೊಬ್ಬರೂ ಹೋಗಿ ಡಿ.ಎಫ್.ಒ.ರವರನ್ನು ಕೇಳಿದರೆ ಅವರು ಪರ್ಮಿಟ್ ಕೊಡುತ್ತಿದ್ದಾರೆ. ಕೆಲವು ಮೇದರರ ಕೋ–ಆಪರೇಟಿವ್ ಸೊಸೈಟಿಗಳವರು ನಾವು ಕೊಟ್ಟಂಥ ಬೊಂಬನ್ನು ದುರುಪಯೋಗಪಡಿಸಿಕೊಂಡಿದ್ದರು. ಆ ರೀತಿ ದುರುಪಯೋಗಪಡಿಸಿಕೊಂಡಿರುವಂಥಾ ಸಂದರ್ಭ ಬಂದಿರುವ ದಿಶೆಯಿಂದ ಅದನ್ನು ಪತ್ತೆ ಮಾಡಿ ತೀವ್ರವಾದ ಕ್ರಮವನ್ನು ಕೈಗೊಂಡು ಈಗ ನಿಲ್ಲಿಸಿದ್ದೇವೆ. ಒಟ್ಟಾರೆ ಹೇಳುವುದಾದರೆ, ಇವರು ಇದೇ ಕಸುಬಿನಿಂದ ಜೀವನ ಮಾಡುತ್ತಿರುವುದರಿಂದ ಸರ್ಕಾರದವರಿ ಎಲ್ಲ ಪ್ರಯತ್ನಗಳನ್ನು ಮಾಡಿ ಇವರಿಗೆ ಬೊಂಬುಗಳನ್ನು ಕೊಟ್ಟುಕೊಂಡು ಬರುತ್ತಿದೆ. ಈ ಬಗ್ಗೆ ಏನಾದರೂ ಸಮಸ್ಯೆಗಳು ಇದ್ದರೆ ಹೇಳಬಹುದು. ಹುಣಸೂರಿನಲ್ಲಿ ಬೊಂಬಿನ ತೊಂದರೆ ಇದೆ ಎಂದು ಡಾ॥ ತಿಮ್ಮೇಗೌಡರು ಹೇಳಿದರು. ಅಲ್ಲಿ ಸರ್ಕಾರಿ ಡಿಪೋ ಇದೆ. ಸುಮಾರು ೨೦–೨೫ ವರ್ಷ ಕ್ಕೊಂದು ಸಾರಿ ಬಿದಿರು ಬೀಜ ಬಿಡತಕ್ಕ ಕಾಲ ಬರುತ್ತದೆ. ಅಂಥ ಸಂದರ್ಭದಲ್ಲಿ ಬಿದಿರು ಒಣಗುತ್ತದೆ. ಆಗ ಬೇರೆ ಕಡೆಯಿಂದ ತರಿಸಿಕೊಡಬೇಕಾಗುತ್ತದೆ. ಸ್ವಲ್ಪ ದಿವಸ ಬಿದಿರು ಸಿಕ್ಕದೆ ತೊಂದರೆಯಾಗಿರ ಬಹುದು. ಸಾಮಾನ್ಯವಾಗಿ ಮಲೆನಾಡು ಪ್ರದೇಶದಲ್ಲಿ ನಾನು ಕಂಡಂತೆ ಬಿದಿರಿನ ಅಭಾವ ಆಗಿಲ್ಲ. ಮೈದಾನ ಪ್ರದೇಶಗಳಲ್ಲಿ ಹಂಚಿಕೆ ವಿಷಯದಲ್ಲಿ ತೊಂದರೆಯಾಗಿರಬಹುದು. ಅಲ್ಲಿ ಕೂಡ ಸೊಸೈಟಿ ಗಳನ್ನು ಮಾಡಿಕೊಂಡಿದ್ದಾರೆ, ಯಾರಿಗೆ ಎಷ್ಟು ಬಿದಿರು ಬೇಕು ಎಂಬುದನ್ನು ಗುರುತಿಸಿ ಕೊಡುವುದು ಆ ಸೊಸೈಟಿಯ ಜವಾಬ್ದಾರಿ. ಸರ್ಕಾರದವರು ಎಲ್ಲ ಕಡೆ ಡಿಪೋ ಮಾಡುವುದು ಸೊಸೈಟಿ ಮಾಡುವುದು ಎಂದರೆ ಕಷ್ಟವಾಗುತ್ತದೆ. ಇರತಕ್ಕ ಸೊಸೈಟಿಗಳಲ್ಲಿ ತೊಂದರೆ ಇದ್ದರೆ ಅಥವಾ ಲೋಪದೋಷಗಳು ಇದ್ದರೆ ಅವನ್ನು ಸರ್ಕಾರದ ಗಮನಕ್ಕೆ ತಂದರೆ ಸರಿಪಡಿಸುವ ವ್ಯವಸ್ಥೆ ಮಾಡುತ್ತೇವೆ. ಬಿದಿರು ನಮ್ಮಲ್ಲಿ ಬೇಕಾದಷ್ಟು ಇದೆ. ಒಂದು ವೇಳೆ ಏನಾದರೂ ತೊಂದರೆಗಳಿದ್ದು ಅವನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಅವನ್ನು ಸರಿಪಡಿಸಿ, ಕಾನೂನು ಪ್ರಕಾರ ಪ್ರತಿ ಸಂಸಾರಕ್ಕೆ ತಿಂಗಳಿಗೆ ೧೦೦ ಬೊಂಬಿಂಗಳ ರೀತಿಯಲ್ಲಿ ಕೊಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಇವತ್ತಿನ ದಿವಸ ಬಿದಿರಿನ ಬೆಲೆ ಜಾಸ್ತಿಯಾಗಿರುವುದರಿಂದ ಅದನ್ನು ಇಳಿಸಿ ಅವರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ಜಿ. ಮಾದೇಗೌಡ.—ಟನ್ನಿಗೆ ೧೨೦ ರೂಪಾಯಿ ಎಂದು ಗೊತ್ತು ಮಾಡಿದ್ದೇವೆ.

ಅಧ್ಯಕ್ಷರು.—ಹೆಗ್ಗಡೆಯವರು ಹೇಳುತ್ತಿದ್ದರು, ಕಾರ್ಖಾನೆಗೆ ಕೊಡುವ ದರದಲ್ಲಿ ಕೊಡುತ್ತಿದ್ದಾರೆ ಎಂದು.

ಶ್ರೀ ಜಿ. ಮಾದೇಗೌಡ.—ಇದು ಕಾರ್ಖಾನೆಯ ದರವಲ್ಲ, ಇವರಿಗೋಸ್ಕರವೇ ಮಾಡಿರುವ ದರ. ಆದುದರಿಂದ ಇದನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ಒಣ ಬಿದಿರು ಕೊಡುತ್ತೀರಾ ಅಥವಾ ಹಸಿ ಬಿದಿರು ಕೊಡುತ್ತೀರಾ ?

ಶ್ರೀ ಜಿ. ಮಾದೇಗೌಡ.—ಕಾರ್ಖಾನೆಗೆ ಕೊಡುವುದು ಹಸಿ ಬಿದಿರು.